ಶ್ರೀ ವಾಟಾಳ್ ನಾಗರಾಜ್.—ಈ ವರದಿಯ ಬಗ್ಗೆ ತಾಸನ ಸಭೆಯಲ್ಲಿ ಏತಕ್ಕೆ ಚರ್ಚೆ ಆಗ ಬಾರದು ?

ಅಧ್ಯಕ್ಷರು.—ಯಾರಾದರೂ ಸೂಚನೆಯನ್ನು ಕಳುಹಿಸಿದಾಗ ಈ ಪ್ರಶ್ನೆ ಬರುತ್ತದೆ.

ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರು ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸುವ ಬಗ್ಗೆ

(೨೦೬) ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸಲು ಸರ್ಕಾರಕ್ಕೆ ಪುನವಿಗಳು ಬಂದಿರುವುದು ನಿಜವಲ್ಲವೆ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವರು).—

(ಅ) ನಿಜ.

(ಆ) ಗುಡಗೂರ್ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗಾಗಿ ೧೯೮೯-೯೦ನೇ ಸಾಲಿನಲ್ಲಿ ಎಷ್ಟು ಕೊಠಡಿಗಳನ್ನು ಕಟ್ಟಿಸಲಿಕ್ಕೆ ಸರ್ಕಾರ ಯೋಜನೆಯನ್ನು ಮಾಡಿದೆ ಮತ್ತು ಆ ಯೋಜನೆಯ ಸಲುವಾಗಿ ಎಷ್ಟು ಹಣವನ್ನು ವ್ಯವಸ್ಥೆಗೊಳಿಸಿದೆ ? ಇದರಲ್ಲಿ ರಾಣೆಬೆನ್ನೂರು ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಾಸ್ಟೆಲ್‌ನ್ನು ಕಟ್ಟಿಸುತ್ತೀರೋ ಹೇಗೆ ? ಅದನ್ನು ಈ ವರ್ಷವೇ ಮಂಜೂರು ಮಾಡುತ್ತೀರೋ ಹೇಗೆ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿರತಕ್ಕಂಥದ್ದು ಡೈರೆಕ್ಟೊರೇಟ್ ಆಫ್ ಬ್ಯಾಕ್‌ವಾರ್ಡ್ ಅಂಡ್ ಮೈನಾರಿಟೀಸ್ ಅವರಿಂದ ರೆಕಮೆಂಡ್ ಆಗಿ ಸರ್ಕಾರಕ್ಕೆ ಬಂದಿದೆ. ಸರ್ಕಾರದವರು ಈ ಸಲ ೨೫ ಹಾಸ್ಟೆಲ್‌ಗಳನ್ನು ಕಟ್ಟುವಂಥ ನಿರ್ಣಯವನ್ನು ಮಾಡಿದ್ದಾರೆ. ಇದನ್ನು ಬಜೆಟ್‌ನಲ್ಲಿ ಸಹ ಹೇಳಿದ್ದೇವೆ ಆ ಪ್ರಕಾರ ತಮ್ಮ ಅಪ್ಲಿಕೇಷನ್ನೂ ಕೂಡಾ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಈ ೨೫ ಹಾಸ್ಟೆಲ್‌ಗಳಲ್ಲಿ ಇದು ಒಂದು ಸೇರಿದೆಯೋ ಹೇಗೆ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಶಿವಣ್ಣ.—ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಕಡಲ ತೀರ ಪ್ರದೇಶದಲ್ಲಿರುವ ಪ್ರವಾಸಿ ಧಾಮಗಳ ಅಭಿವೃದ್ಧಿ ಬಗ್ಗೆ

೨೫೨. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ಮತ್ತು ಕೇರಳದ ಕಡಲ ತೀರಗಳಲ್ಲಿ ಆಕರ್ಷಕ ಪ್ರವಾಸಿ ಧಾಮಗಳನ್ನು ರಚಿಸಿ ದಂತೆ, ಕರ್ನಾಟಕದ ಕರಾವಳಿಯಲ್ಲಿ ಸುಂದರವಾದ ಕಡಲ ತೀರಗಳಿದ್ದರೂ ಪ್ರವಾಸಿ ಧಾಮಗಳ ರಚನೆ ಆಗದಿರಲು ಕಾರಣಗಳು.

ಆ) ಪ್ರವಾಸಿ ಧಾಮಗಳ ರಚನೆಗಾಗಿ ಕರ್ನಾಟಕದ ಕರಾವಳಿಯಲ್ಲಿ ಆಯ್ಕೆ ಆದ ಸ್ಥಳಗಳು

ಇ) ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗುವ ಕ್ರಮಗಳೇನು ಹಾಗೂ ಯಾವ ಯಾವ ಅವ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ?